ಶ್ರೀ ಎಂ ಮಹಾದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿರುವ ಸಹಕಾರಿ ರಂಗದ ಸಕ್ಕರೆ ಕಾರ್ಖಾನೆಗಳ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಿ ಪರಿಹಾರ ಸೂಚಿಸಿ ವರದಿ ನೀಡುವಂತೆ ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಆದೇಶ ಸಂಖ್ಯೆ ಡಿಇಎ (ಸಿಎಸ್‌ಸಿ) 1 2003 ದಿನಾಂಕ 09–01–2003 ರನ್ವಯ ಸರ್ಕಾರವು ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯು ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಇನ್ನೂ ಅಂತಿಮ ತೀರ್ಮಾನವಾಗಿರುವುದಿಲ್ಲ

ಆ) ಸರ್ಕಾರದ ಅಂತಿಮ ತೀರ್ಮಾನದ ಪ್ರಕಾರ ಮುಂದಿನ ಕ್ರಮ ವಹಿಸಲಾಗುವುದು

ಇ) ಸರ್ಕಾರ್ದ ಅಂತಿಮ ತೀರ್ಮಾನದ ಪ್ರಕಾರ ಸೂಕ್ತ ಕ್ರಮ ವಹಿಸಲಾಗುವುದು

ವೀರಶೈವ ಪಂಚಮಸಾಲ ಸಮಾಜವನ್ನು ಹಿಂದುಳಿದ ವರ್ಗಕ್ಕೆ ಸೆರಿಸುವುದು

242 (46) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವೀರಶೈವ ಪಂಚಮ ಸಾಲಿನ ಸಮಾಜವನ್ನು ಹಿಂದುಳಿದ ವರ್ಗಕ್ಕೆ ಸೇರಿಸಬೇಕೆಂದು ಮನವಿಗಳು ಸರ್ಕಾರಕ್ಕೆ ಬಂದಿವೆಯೇ

ಆ) ಹಾಗಿದ್ದಲ್ಲಿ, ಈ ಸಮಾಜವನ್ನು ಹಿಂದುಳಿದ ವರ್ಗಕ್ಕೆ ಸೇರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು,

ಇ) ಈ ಸಮಾಜದ ಜನರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಉಳಿದ ಸಮಾಜದವರಿಗಿಂತಲೂ ಹಿಂದುಳಿದವರಾಗಿದ್ದು, ಇವರನ್ನು ಕೂಡಲೇ ಹಿಂದುಳಿದ ವರ್ಗಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲು ಕ್ರಮ ಕೈಗೊಳ್ಳಲಾಗುವುದೇ

ಈ) ರಾಜ್ಯದಲ್ಲಿ ಎಷ್ಟು ಜನ ವೀರಶೈವ ಪಂಚಮಸಾಲಿ ಸಮಾಜದವರು ಇರುತ್ತಾರೆ?

ಶ್ರೀ ಎ ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಆ) ಈ ಮನವಿಗಳನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಪರಿಶೀಲಿಸುತ್ತಿದ್ದು, ಆಯೋಗದಿಂದ ವರದಿ ಬಂದ ನಂತರ ಸರ್ಕಾರವು ಪರಿಶೀಲಿಸಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುವುದು

ಇ) ಈ ಬಗ್ಗೆ ಮನವಿಗಳು ಬಂದಲ್ಲಿ ಸರ್ಕಾರವು ಅದನ್ನು ಪರಿಶೀಲಿಸುತ್ತದೆ

ಈ) ಜಸ್ಟೀಸ್ ಓ ಚಿನ್ನಪ್ಪರೆಡ್ಡಿಯವರ ವರದಿಯನ್ವಯ ರಾಜ್ಯದಲ್ಲಿ 1988ನೇ ಸಾಲಿನಲ್ಲಿ 67,62, 703 ಲಿಂಗಾಯಿತರ ಜನಸಂಖ್ಯೆ ಲಭ್ಯವಿರುತ್ತದೆ ಆದರೆ ವೀರಶೈವ ಪಂಚಮಸಾಲಿ ಸಮಾಜದ ಪ್ರತ್ಯೇಕ ಜನಗಣತಿ ಮಾಡದೇ ಇರುವುದರಿಂದ ಇವರ ಸಂಖ್ಯೆ ಸರ್ಕಾರದಲ್ಲಿ ಲಭ್ಯವಿರುವುದಿಲ್ಲ

ರಾಜ್ಯದಲ್ಲಿ ರೇಷ್ಮೆ ಕಾರ್ಖಾನೆಗಳ ಪುನಶ್ಚೇತನ

243 (541) ಶ್ರೀ ಎ ಆರ್ ಕೃಷ್ಣಮೂರ್ತಿ (ಸಂತೇಮರಳ್ಳಿ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ರೇಷ್ಮೆ ಕಾರ್ಖಾನೆಗಳು ಇವೆ ಅವುಗಳು ಯಾವುವು ಹಾಗೂ ಸದರಿ ರೇಷ್ಮೆ ಕಾರ್ಖಾನೆಗಳ ವ್ಯಾಪ್ತಿ ಏನು ಮತ್ತು ಸದರಿ ಕಾರ್ಖಾನೆಗಳನ್ನು ತೆರೆಯಲಾದ ಉದ್ದೇಶವೇನು (ವಿವರ ನೀಡುವುದು)

ಆ) ರೇಷ್ಮೆ ಗೂಡು ಕೊಳ್ಳುವವರು (ರೀಲರ್) ಏನಾದರೂ ಈವರೆವಿಗೆ ಮುಷ್ಕರ ಹೂಡಿದ್ದಾರೆಯೇ ಮುಷ್ಕರ ಹೂಡಲು ಕಾರಣವೇನು ಇವರ ಸಮಸ್ಯೆಗಳನ್ನು ಖಾಯಂ ಆಗಿ ಪರಿಹರಿಸಲಾಗಿದೆಯೇ (ವಿವರ ನೀಡುವುದು)

ಇ) ರೀಲರ್‌ಗಳ ಮುಷ್ಕರದಿಂದಾಗಿ ಗೂಡು ಬೆಳೆದ ರೈತರಿಗೆ ಏನಾದರೂ ತೊಂದರೆಯಾಗಿದೆಯೇ ಆಗಿದ್ದಲ್ಲಿ ಯಾವಾಗ ಯಾವ ರೀತಿಯಲ್ಲಿ ತೊಂದರೆಯನ್ನು ನಿವಾರಿಸಲಾಗಿತ್ತು

ಈ) ರೇಷ್ಮೆ ಕಾರ್ಖಾನೆಗಳ ಮೂಲಕ ಗೂಡನ್ನು ಖರೀದಿಸಿ ರೈತರಿಗೆ ತೊಂದರೆ ನಿವಾರಣೆ ಮಾಡಲಾಗಿದೆಯೇ ಹಾಗಿದ್ದಲ್ಲಿ ಇತ್ತೀಚೆಗೆ ಸರ್ಕಾರ ಕೆಲವು ರೇಷ್ಮೆ ಕಾರ್ಖಾನೆಗಳನ್ನು ಮುಚ್ಚಲು ಉದ್ದೇಶಿಸಿರುವ ಔಚಿತ್ಯವೇನು (ವಿವರ ನೀಡುವುದು)

ಉ) ರೇಷ್ಮೆ ಬೆಳೆಗಾರರ ಹಿತದೃಷ್ಟಿಯಿಂದ ಮುಚ್ಚಲು ಉದ್ದೇಶಿಸಿರುವ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ (ವಿವರ ನೀಡುವುದು)

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ರೇಷ್ಮೆ ಇಲಾಖೆಯ ವ್ಯಾಪ್ತಿಯಲ್ಲಿ ಈ ಕೆಳಗಿನ ರೇಷ್ಮೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ

* ಸರ್ಕಾರಿ ರೇಷ್ಮೆ ಕಾರ್ಖಾನೆ, ಕೊಳ್ಳೆಗಾಲ
* ಸರ್ಕಾರಿ ರೇಷ್ಮೆ ಕಾರ್ಖಾನೆ, ಮಾಂಬಳ್ಳಿ
* ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ
* ಸರ್ಕಾರಿ ರೇಷ್ಮೆ ಕಾರ್ಖಾನೆ, ಚಾಮರಾಜನಗರ
* ಸರ್ಕಾರಿ ರೇಷ್ಮೆ ನೂಲು ಬಿಚ್ಚುವ ಕಿರು ಘಟಕ ತೋಳಹುಣಸೆ

ರಾಜ್ಯದಲ್ಲಿ ರೇಷ್ಮೆ ಬೆಳೆಗಾರರಿಗೆ ಸ್ಪರ್ಧಾತ್ಮಕ ದರ ದೊರೆಯುವಂತೆ ಮಾಡುವ ಮೂಲ ಉದ್ದೇಶದಿಂದ ಈ ಕಾರ್ಖಾನೆಗಳನ್ನು ಸ್ಥಾಪಿಸಲಾಗಿತ್ತು

ಆ) ರೇಷ್ಮೆ ವಿನಿಯಮ ಕೇಂದ್ರಗಳಲ್ಲಿ ರೇಷ್ಮೆ ಮೇಲೆ ಮಾರುಕಟ್ಟೆ ಶುಲ್ಕ ವಿಧಿಸಿರುವುದರ ವಿರುದ್ಧ 1983ನೇ ಸಾಲಿನಲ್ಲಿ ಹಾಗೂ ರೇಷ್ಮೆ ನೂಲಿನ ಮೇಲೆ ವಿಧಿಸಲಾದ ತೆರಿಗೆ ವಿರುದ್ಧ 1990ನೇ ಸಾಲಿನಲ್ಲಿ ರೀಲರುಗಳು ರಾಜ್ಯಾದ್ಯಂತ ಮುಷ್ಕರ ಹೂಡಿದ್ದರು ನಂತರ ಚಾಮರಾಜನಗರ ಜಿಲ್ಲೆಯ ಖಾಸಗಿ ರೀಲರುಗಳು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ರೇಷ್ಮೆ ನೂಲನ್ನು ಖರೀದಿಸುತ್ತಿಲ್ಲದಿರುವ ವಿರುದ್ಧ 2002ನೇ ಸಾಲಿನಲ್ಲಿ ಮುಷ್ಕರ ಹೂಡಿದ್ದರು ರೀಲರುಗಳ ಸಮಸ್ಯೆಗಳನ್ನು ಆಗಿಂದಾಗ್ಗೆ ಪರಿಶೀಲಿಸಿ ಪರಿಹರಿಸಲಾಗಿದೆ

ಇ) ರೀಲರುಗಳ ಮುಷ್ಕರದಿಂದ ರೇಷ್ಮೆ ಬೆಳೆಗಾರರಿಗೆ ಅವರು ಬೆಳೆದ ಗೂಡು ಮಾರಾಟಕ್ಕೆ ಸ್ವಲ್ಪ ಕಾಲ ತೊಂದರೆಯಾಗಿತ್ತು ಇಂತಹ ಅವಧಿಯಲ್ಲಿ ಮಾರುಕಟ್ಟೆಗೆ ಬಂದ ಎಲ್ಲ ಗೂಡುಗಳನ್ನು ಸರ್ಕಾರಿ ರೇಷ್ಮೆ ಕಾರ್ಖಾನೆಗಳು ಖರೀದಿಸಿದ್ದವು

ಈ) ಹೌದು ಆದರೆ ರೇಷ್ಮೆ ಕಾರ್ಖಾನೆಗಳಲ್ಲಿನ ಉತ್ಪಾದನಾ ಕೆಲಸಗಾರರು ನಿವೃತ್ತಿ ಹೊಂದಿದ್ದು ಯಂತ್ರೋಪಕರಣಗಳು ಹಳೆಯದಾಗಿರುತವ ಕಾರಣ ಉತ್ಪಾದನೆ ಸಾಮರ್ಥ್ಯ ಕಡಿಮೆಯಾಗಿ ರೇಷ್ಮೆ ಉತ್ಪಾದನಾ ವೆಚ್ಚ ಹೆಚ್ಚಾಗಿದೆ ಆದ್ದರಿಂದ 4 ರೇಷ್ಮೆ ಕಾರ್ಖಾನೆಗಳನ್ನು 2 ಘಟಕಗಳಾಗಿ ಪರಿವರ್ತಿಸಲು ಸರ್ಕಾರ ಆದೇಶಿಸಿರುತ್ತದೆ

ಉ) 4 ಕಾರ್ಖಾನೆಗಳನ್ನು 2ನ್ನಾಗಿ ಪುನರ್ಘಟಿಸಿ, ಅವುಗಳನ್ನು ಲಾಭದಾಯಕವಾಗಿ ನಡೆಸಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ

ರಾಜ್ಯದಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ

244 (542) ಶ್ರೀ ಎ ಆರ್ ಕೃಷ್ಣಮೂರ್ತಿ (ಸಂತೇಮರಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈವರೆಗೂ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಸರ್ಕಾರಿ ಉದ್ಯೋಗ ಪಡೆದಿರುವ ವ್ಯಕ್ತಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ ಕೈಗೊಂಡಿದ್ದಲ್ಲಿ ಯಾವ ಯಾವ ಇಲಾಖೆಗೆ ಸಂಬಂಧಿಸಿದ ಯಾವ ಯಾವ ಉದ್ಯೋಗಿ ಅಧವಾ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ (ಪದನಾಮ ಹಾಗೂ ಹುದ್ದೆ ಸಹಿತ ವಿವರ ನೀಡುವುದು)

ಆ) ಈ ಪ್ರಕರಣಗಳು ಯಾವ ಹಂತದಲ್ಲಿದೆ ಪೂರ್ಣಗೊಂಡಿರುವ ಪ್ರಕರಣಗಳ ವಿವರ ನೀಡುವುದು

ಇ) ಸದರಿ ಪ್ರಕರಣಗಳು ನ್ಯಾಯಾಲಯದಲ್ಲಿ ಇದ್ದಲ್ಲಿ ಯಾವ ಪ್ರಕರಣಗಳು ನ್ಯಾಯಾಲಯದಲ್ಲಿ ಇವೆ ಇನ್ನುಳಿದ ಪ್ರಕರಣಗಳು ಯಾವ ಯಾವ ಇಲಾಖೆಗಳಲ್ಲಿ ಇವೆ ಮತ್ತು ಇಲಾಖಾ ವ್ಯಾಪ್ತಿಯಲ್ಲಿರುವ ಪ್ರಕರಣಗಳಿಗೆ ವಿಚಾರಣಾಧಿಕಾರಿಗಳು ಯಾರು (ವಿವರ ನೀಡುವುದು)

ಈ) ಸುಳ್ಳು ಜಾತಿ ಪ್ರಮಾಣ ಪತ್ರಗಳ ಪ್ರಕರಣಗಳನ್ನು ಪತ್ತೆ ಹಚ್ಚಲು ಅಧವಾ ಸಾಬೀತುಪಡಿಸಲು ಸರ್ಕಾರ ಅನುಸರಿಸುವ ಮಾನದಂಡವೇನು ಮತ್ತು ಜಾತಿ ಪ್ರಮಾಣದ ದೃಢೀಕರಣವನ್ನು ಯಾವ ಇಲಾಖೆ ನೀಡಬೇಕು? (ವಿವರ ನೀಡುವುದು)

ಶ್ರೀ ಎ ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಈವರೆವಿಗೂ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಸರ್ಕಾರಿ ಉದ್ಯೋಗ ಪಡೆದಿರುವ ವ್ಯಕ್ತಿ ಜಾತಿಯ ಬಗ್ಗೆ ಕೂಲಂಕುಷವಾಗಿ ವಿಚಾರಣೆ ಮಾಡಿ ವಿಚಾರಣಾ ವರದಿ ಮತ್ತು ದಾಖಲಾತಿಗಳನ್ನು ರಾಜ್ಯ ಮಟ್ಟದ ಜಾತಿ ಪರಿಶೀಲನಾ ಸಮಿತಿ/ ಜಿಲ್ಲಾ ಮಟ್ಟದ ಜಾತಿ ಪರಿಶೀಲನಾ ಸಮಿತಿ ಗಳಿಗೆ ಕಳುಹಿಸಿ ಅಂತಿಮ ನಿರ್ಣಯ ಪಡೆದು ಸಂಬಂಧಪಟ್ಟ ಪೊಲೀಸ್ ಠಾಣೆ ಗಳಲ್ಲಿ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ ಇವರುಗಳು ಯಾವ ಯಾವ ಇಲಾಖೆಗೆ ಸಂಬಂಧಿಸಿದ್ದಾರೆ ಹಾಗೂ ಅವರ ಹುದ್ದೆಯ ವಿವರಗಳನ್ನು ಲಗತ್ತಿಸಿರುವ ಅನುಬಂಧ–1 ರಲ್ಲಿ ನೀಡಲಾಗಿದೆ

ಆ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ (ಕಲಂ4)

ಇ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ (ಕಲಂ 5)

ಈ) ಸುಳ್ಳು ಜಾತಿ ಪ್ರಮಾಣ ಪತ್ರಗಳ ಪ್ರಕರಣಗಳನ್ನು ಸಾಬೀತುಪಡಿಸಲು ವಿಚಾರಣಾ ಸಮಯದಲ್ಲಿ ಆಪಾದಿತರು ವಂಶವೃಕ್ಷ ಶಾಲಾ ದಾಖಲಾತಿಗಳು, ಕಸಬು ಆಚಾರ ವಿಚಾರ, ತಂದೆ